ಎಂ ವಿ ಸಿ ನಂ. 30/2022
ಪಿ ಡಬ್ಲ್ಯೂ: 1
ದಿನಾಂಕ 22-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 2ನೇ ಎದುರುದಾರರ ಪರ: ಶ್ರೀ ಕೆ ಎ ವಕೀಲರಿಂದ:

ನಾನು ಮಸೀದಿಯಲ್ಲಿ ಗುರುವಾಗಿ ಕೆಲಸ ಮಾಡುತ್ತಿದ್ದೇನೆ. ಅಪಘಾತವಾದ ದಿನ ನಾನು ಗೋಣಿಬೀಡಿನಿಂದ ಬೇಲೂರಿಗೆ ದ್ವಿಚಕ್ರ ವಾಹನದಲ್ಲಿ ರಾತ್ರಿ 9.30 ಕ್ಕೆ ಹೋಗುತ್ತಿದ್ದೇನೆ. ಅಪಘಾತವಾದ ದಿನ ನಾನು ಹೋಗುತ್ತಿದ್ದ ವಾಹನ ಬಿದರೆಹಳ್ಳಿಯ ಖಾಸಿಂ ಎಂಬುವವರಿಗೆ ಸೇರಿದ್ದಾಗಿರುತ್ತದೆ. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗಿ ಇಲ್ಲ ಎಂದರೆ ನಿಜ. ಅಪಘಾತವಾದ ದಿನ ದ್ವಿಚಕ್ರವಾಹನದಲ್ಲಿ ನನ್ನ ಜತೆ ಅಹಮ್ಮದ್ ರಜದ್ ಎನ್ನುವವರು ಸಹ ಇದ್ದರು. ನನ್ನ ಎದುರಿಗೆ ಹೋಗುತ್ತಿದ್ದ ವಾಹನವನ್ನು ಓವರ್ಟೇಕ್ ಮಾಡಿಕೊಂಡು ನಾನು ರಸ್ತೆಯ ಬಲಭಾಗಕ್ಕೆ ಬಂದ ಕಾರಣ ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

ಚಾಲನಾ ಪರವಾನಿಗಿ ಇಲ್ಲದ ಕಾರಣ ನನಗೆ ವಾಹನವನ್ನು ಸರಿಯಾಗಿ ಚಾಲನೆ ಮಾಡದೆ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ರಸ್ತೆಯು ತಿರುವಿನಿಂದ ಕೂಡಿದೆ ಎಂದರೆ ನಿಜ. ರಾತ್ರಿಯಾದ ಕಾರಣ ಎದುರುಗಡೆಯಿಂದ ಬರುತ್ತಿದ್ದ ವಾಹನ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನದಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆ ಕರೆದುಕೊಂಡು ಹೋಗಿ ಮುಂದಿನ ಚಿಕಿತ್ಸೆಗೆ ಮಂಗಳೂರಿ ಎನ್ನಪೋಯ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ. ಮಂಗಳೂರಿ ಎನ್ನಪೋಯ

ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ 20 ದಿನಗಳ ಕಾಲ ದಾಖಲಾಗಿದ್ದೇನು.

ಅಪಘಾತದಿಂದ ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಮಾತ್ರ ಆಗಿದ್ದವು ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದುಕೊಂಡ ನಂತರ ಅಪಘಾತದಲ್ಲಿ ನನಗೆ ಆದ ಗಾಯಗಳು ಸಂಪೂರ್ಣವಾಗಿ ವಾಸಿಯಾಗಿವೆ ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದುಕೊಂಡ ನಂತರ ನಾನು ಇತ್ತೀಚೆಗೆ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮುಖ ಸರ್ಜರಿ ಹೋಗಿದ್ದೇನು ಎಂದು ನುಡಿದಿರುತ್ತಾರೆ. ನನಗೆ ಆದ ಗಾಯಗಳು ಸಂಪೂರ್ಣವಾಗಿ ವಾಸಿಯಾಗಿವುದರಿಂದ ನಾನು ಇತ್ತೀಚೆಗೆ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ಸಮಯದಲ್ಲಿ ನಾನು ಮಸೀದಿಯಲ್ಲಿ ಗುರುವಾಗಿ ಕೆಲಸ ಮಾಡುತ್ತಿದ್ದೇನು. ನನಗೆ ಮಾಸಿಕ 20 ಸಾವಿರ ರೂ ವೇತನ ಬರುತ್ತದೆ. ನನಗೆ ವೇತನವನ್ನು ಕೆಲವು ಬಾರಿ ನಗದಾಗಿಯು ಕೊಡುತ್ತಿದ್ದರು ಮತ್ತು ಬ್ಯಾಂಕಿಗೂ ಹಾಕುತ್ತಿದ್ದರು. ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಪಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿ ಖಾತೆಗೆ ಹಾಕುತ್ತಿದ್ದರು ಎಂದು ನುಡಿದಿರುತ್ತಾರೆ. ನನಗೆ ಯಾವುದೇ ರೀತಿಯ ದುಡಿಮೆ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಕಾಲು ನೋವು ಇದೆ ಎಂದು ನುಡಿದಿರುತ್ತಾರೆ. ನನಗೆ ನನ್ನ ಧಾರ್ಮಿಕ ಕೆಲಸವನ್ನು ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಮಾಜನ್ನು ಹೊರತು ಪಡಿಸಿ ಉಳಿದ ಧಾರ್ಮಿಕ ಕೆಲಸವನ್ನು ಮಾಡಬಹುದು ಎಂದರೆ ನಿಜ. ಮದರಸದಲ್ಲಿ ನಾನು ಕೆಲಸ ಮಾಡಬಹುದು ಎಂದರೆ ನಿಜ.

ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲನೆ ಮಾಡುತ್ತಿದ್ದ ಕಾರಿಗೆ 2 ನೇ ಎದುರುದಾರರು ಹೆಚ್

ವಿ ವಿಜಯ್ ಎನ್ನುವವರಿಗೆ ವಿಮೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ದಿನ ಕಾರಿನ ಮಾಲೀಕರು ಹೆಚ್ ವಿ ವಿಜಯ್ ಆಗಿದ್ದರೂ ಸಹ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾಲನೆ ಮಾಡುತ್ತಿದ್ದ ವಾಹನ ಮಾಲೀಕರು ಮತ್ತು ವಿಮಾ ಕಂಪನಿಯವರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ನಿಜ. 1ನೇ ಎದುರುದಾರರಿಗೆ ಕಾರನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ 2ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.